ನಾವು ಇಲ್ಲಿ ತುಂಗಾ, ಮಾಲತಿ, ನದಿಗಳನ್ನು ಇಟ್ಟುಕೊಂಡು ಮುಳುಗಿ ಹಾಳಾಗಿ ಹೋಗುತ್ತಿದ್ದೇವೆ. ಅದರಲ್ಲಿ ನೀರು ಹರಿಯುತ್ತಾ ಇದೆ. ಇಲ್ಲಿ ನಾವು ಮುಳುಗಡೆಯಾಗುತ್ತಿದ್ದೇವೆ. ಇಂತಹ ದಯನೀಯವಾದ ಸ್ಥಿತಿ ನಮಗೆ ಇದೆ. ಇಲ್ಲಿ ಬರುವಂತಹ ಪ್ರಾಜೆಕ್ಟ್ ಅನ್ನು ಪೂರ್ಣ ಮಾಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಮಾನ್ಯ ಆರಗ ಜ್ಞಾನೇಂದ್ರರವರೆ, ತಾವು ತಮ್ಮ ನೋವನ್ನು ಈಗ ಪ್ರಶ್ನೋತ್ತರ ಕಾಲದಲ್ಲಿ ಪ್ರಸ್ತಾಪ ಮಾಡಿದರೆ ಹೇಗೆ, ತಾವು ಬೇಡಿಕೆಗಳ ಮೇಲೆ ಮಾತನಾಡುವಾಗ ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಾವು ಯಾವುದರ ಮೇಲೆ ಮಾತನಾಡಿದರೂ ಪೂರ್ಣ ಮಾಡುವುದಿಲ್ಲ. ನಾವು ಯಾವುದರ ಮೇಲೆ ಮಾತನಾಡಿದರೂ ಇದೇ ಕತೆನೇ.

ಅಧ್ಯಕ್ಷರು: ಇದೇ ಕತೆ ಎಂದರೆ ಏನು ಮಾಡುವುದಕ್ಕೆ ಆಗುತ್ತದೆ? ಅದೇ ಕತೆ ಎಂದು ಬರೆದುಕೊಂಡು ಹೋಗುವುದಷ್ಟೆ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ಈ ದಬ್ಬಣಗದ್ದೆ ಏತ ನೀರಾವರಿ ಯೋಜನೆ ಇದೆಯಲ್ಲಾ, ಇದನ್ನು ಮಾರ್ಚ್ ತಿಂಗಳೊಳಗೆ ಸಂಪೂರ್ಣ ಮುಗಿಸುವಂತಹ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡುತ್ತೇವೆ. ಇದರ ಜೊತೆಗೆ ಇಲಾಖಾಧಿಕಾರಿಗಳ ಜೊತೆ ಸ್ಥಳಕ್ಕೆ ಭೇಟಿ ಮಾಡಿ ಪರಿಶೀಲನೆಯನ್ನು ಮಾಡಿ ಸೂಕ್ತ ಕ್ರಮವನ್ನು ಕೈಗೊಳ್ಳುವ ಭರವಸೆಯನ್ನು ನೀಡುತ್ತಿದ್ದೇನೆ.

(ಪ್ರಶ್ನೆ: 157 (861)ಕ್ಕೆ ಸಂಬಂಧಪಟ್ಟ ಸದಸ್ಯರು ಸದನದಲ್ಲಿ ಹಾಜರು ಇರಲಿಲ್ಲ)

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಪಠ್ಯ ಪುಸ್ತಕ ವಿತರಣೆಯಲ್ಲಿ ಉಂಟಾಗಿರುವ ವಿಳಂಬದ ಬಗ್ಗೆ

158 (778) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಶೈಕ್ಷಣಿಕ ಸಾಲಿನಲ್ಲಿ ಪಠ್ಯಪುಸ್ತಕ ವಿತರಣೆಯಲ್ಲಿ ವಿಳಂಬವಾಗಲು ಕಾರಣವೇನು ;

(ಆ) ವಿದ್ಯಾರ್ಥಿಗಳಿಗೆ ನಿಗದಿತ ಕಾಲದಲ್ಲಿ ಪಠ್ಯಪುಸ್ತಕಗಳನ್ನು ಒದಗಿಸುವಲ್ಲಿ ನಿರ್ಲಕ್ಷ್ಯ ತೋರುವ ಮತ್ತು ಆ ಮೂಲಕ ಸಮಸ್ಯಗಳನ್ನು ಹುಟ್ಟು ಹಾಕಲು ಕಾರಣಕರ್ತರಾದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಪಠ್ಯಪುಸ್ತಕಗಳನ್ನು ಸಕಾಲದಲ್ಲಿ ಒದಗಿಸುವ ದಿಸೆಯಲ್ಲಿ ಸರ್ಕಾರದ ಸಮರ್ಪಕ ಯೋಜನೆಗಳೇನು ?

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಮಾನ್ಯ ಪ್ರೌಢ ಶಿಕ್ಷಣ ಸಚಿವರು):

(ಅ) ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಪಠ್ಯಪುಸ್ತಕಗಳ ವಿತರಣೆಯಲ್ಲಿ ಯಾವುದೇ ವಿಳಂಬವಾಗಿಲ್ಲ.

(ಆ) ಮತ್ತು (ಇ) ಮೇಲೆ 'ಅ' ಗೆ ನೀಡಿರುವ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ: ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಗೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಪಠ್ಯಪುಸ್ತಕಗಳ ವಿತರಣೆಯಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲವೆಂದು ತಿಳಿಸಿದ್ದಾರೆ. ಇವತ್ತು ನನ್ನ ಪ್ರಶ್ನೆ ಇರುವಂಥಾದ್ದು ಏನೆಂದರೆ, ಈ ವರ್ಷ ಸರ್ಕಾರ, ಸರ್ಕಾರಿ ಶಾಲೆಗಳಿಗೆ, ಮೇ 31ರೊಳಗೆ ಎಲ್ಲಾ ಪುಸ್ತಕಗಳನ್ನು ಒದಗಿಸಿದೆ. ಆದರೆ ಖಾಸಗಿ ಅನುದಾನಿತ ಶಾಲೆಗಳಲ್ಲಿ, ಅನುದಾನ ರಹಿತವಾದಂತಹ ಶಾಲೆಗಳ ವಿದ್ಯಾರ್ಥಿಗಳಿಗೆ, ಇವರು ಅಂಗಡಿಗಳ ಮೂಲಕ ಪುಸ್ತಕಗಳನ್ನು ತೆಗೆದುಕೊಳ್ಳಬೇಕಾದಂಥ ಸ್ಥಿತಿ ಇರುವುದರಿಂದ, ಅವರಿಗೆ ಸರಿಯಾಗಿ ಪುಸ್ತಕಗಳು ಸಿಗಲಿಲ್ಲ. ಇವತ್ತು ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಲ್ಲಿ ಎಲ್ಲಾ ರೀತಿಯಲ್ಲಿ ಆ ವಿದ್ಯಾರ್ಥಿಗಳಿಗೆ ಉಚಿತವಾಗಿ, ಪುಸ್ತಕಗಳನ್ನು ಕೊಡುವಂತಹ ವ್ಯವಸ್ಥೆ ಇದೆ. ಈವತ್ತು ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿನ ಮಕ್ಕಳಿಗೆ ಪುಸ್ತಕಗಳು ಉಚಿತವಾಗಿ ಸಿಕ್ಕುವುದಿಲ್ಲ. ಅವರು ಅದನ್ನು ಹಣ ಕೊಟ್ಟು ಅಂಗಡಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರೀ ಶಾಲೆಗಳಲ್ಲಿ ಧರ್ಮಾರ್ಥ ಸಿಗುತ್ತದೆ. ಆದರೆ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಮಕ್ಕಳಿಗೆ ಧರ್ಮಾರ್ಥ ಸಿಗುವುದಿಲ್ಲ. ಈ ರೀತಿಯಲ್ಲಿ ತಾರತಮ್ಯವಿದೆ. ಇದರ ಜೊತೆಗೆ, ಅವರು ಹಣ ಕೊಟ್ಟರೂ ಕೂಡ ಅಂಗಡಿಗಳಲ್ಲಿ ಪುಸ್ತಕಗಳು ಸಿಗದಂಥ ಪರಿಸ್ಥಿತಿ ಇದೆ. ಸಂಬಂಧಪಟ್ಟ ಸಚಿವರಿಂದ ಇದಕ್ಕೆ ನಾನು ಸೂಕ್ತ ಉತ್ತರವನ್ನು ಕೇಳುತ್ತಿದ್ದೇನೆ.

ಶ್ರೀ ಬಸವರಾಜ ಎಸ್. ಹೊರಟ್ಟಿ: ಅವರು ಕೇಳಿದ ಪ್ರಶ್ನೆಗೆ ಈ ಮೊದಲೇ ನಾನು ಉತ್ತರವನ್ನು ಹೇಳಿದ್ದೇನೆ. ಅವರು ಹೇಳುವುದು ನಿಜ. ಸರ್ಕಾರೀ ಶಾಲೆಗಳಲ್ಲಿ ಸುಮಾರು 2 ಕೋಟಿ 79 ಲಕ್ಷ ಪುಸ್ತಕಗಳನ್ನು ಸರ್ಕಾರದ ವತಿಯಿಂದ ಮಕ್ಕಳಿಗೆ ಕೊಡುತ್ತಿದ್ದೇವೆ. ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಮಕ್ಕಳಿಗೆ ಹಾಗೆ ಉಚಿತವಾಗಿ ಕೊಡುವಂಥ ಯೋಜನೆ ಇಲ್ಲ. ಆದರೆ ಅನುದಾನಿತ ಶಾಲೆಗಳ ಮಕ್ಕಳಿಗೆ ಕೊಡಬೇಕು ಎನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ. ಹಣಕಾಸಿನ ಲಭ್ಯತೆಯನ್ನು ಪರಿಶೀಲನೆ ಮಾಡಿ, ಅನುದಾನಿತ ಶಾಲೆಗಳ ಮಕ್ಕಳಿಗೂ ಕೊಡಬಹುದೇ ಎನ್ನುವ ಬಗ್ಗೆ ಪರಿಶೀಲಿಸಬೇಕಾಗಿದೆ. ಹಾಗಾಗಿ, ಹಣಕಾಸಿನ ಲಭ್ಯತೆಯನ್ನು ನೋಡಿ ಅದನ್ನು ಪರಿಶೀಲಿಸಲಾಗುವುದು ಖಾಸಗಿ ಅಂಗಡಿಕಾರರಿಗೆ, ಅವರು ಪುಸ್ತಕಗಳನ್ನು ಖರೀದಿ ಮಾಡುವಾಗ, ಅವರು ಹೇಗೇಗೆ ಹಣ ಕೊಡುತ್ತಾರೋ ಹಾಗೆಯೇ ಪುಸ್ತಕಗಳನ್ನು ಕೊಡುತ್ತಾರೆ. ಹಾಗಾಗಿ, ಪುಸ್ತಕಗಳ ವಿಚಾರದಲ್ಲಿ ಇವತ್ತು ಯಾವುದೇ ರೀತಿಯ ತೊಂದರೆಯಿಲ್ಲ. ಈ ದಿನಾಂಕದವರೆಗೆ ರಾಜ್ಯದಲ್ಲಿ ಖಾಸಗಿಯವರಿಗೆ ಯಾವುದೇ ರೀತಿಯಾದ ಪುಸ್ತಕದ ತೊಂದರೆಯಿಲ್ಲ. 7ನೇ ತರಗತಿಯ ಪುಸ್ತಕವೊಂದನ್ನು ಬಿಟ್ಟು ಉಳಿದುದ್ದೆಲ್ಲಾ ಸರಿಯಾಗಿದೆ ಎನ್ನುವಂಥ

ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದರ ಜೊತೆಗೆ, ಪ್ರತಿ ಜಿಲ್ಲೆಯಲ್ಲಿ ನಾವು ಡಿಡಿಪಿಐ ರವರ ಅಧ್ಯಕ್ಷತೆಯಲ್ಲಿ ಒಂದು ಮಾರಾಟ ಮಳಿಗೆಯನ್ನು ಮಾಡಿದ್ದೇವೆ. ಅಲ್ಲೇನಾದರೂ ತೊಂದರೆಯಿದ್ದರೆ, ತಕ್ಷಣ ಡಿಡಿಪಿಐ ರವರನ್ನು ಸಂಪರ್ಕ ಮಾಡಿದರೆ, ಆಗಿಂದಾಗಲೇ ಪುಸ್ತಕಗಳ ವ್ಯವಸ್ಥೆಯನ್ನು ಮಾಡುವಂಥಾದ್ದನ್ನು ಮಾಡುತ್ತಾರೆ. ಹಾಗಾಗಿ, ಅಲ್ಲಿಗೆ ಸಾಕಷ್ಟು ಪುಸ್ತಕಗಳು ಹೋಗಿವೆ. ಆದ್ದರಿಂದ ಪುಸ್ತಕಗಳ ಯಾವುದೇ ರೀತಿಯಾದಂಥ ತೊಂದರೆ ಇವತ್ತು ಆಗಿಲ್ಲ. ಹಿಂದೆ ಆದದ್ದು ನಿಜ. ಅದನ್ನು ಸರಿಪಡಿಸಿದ್ದೇನೆ. ಬಿ.ಇ.ಓ.ಗಳು ಮತ್ತು ಡಿಡಿಪಿಐ ಗಳಿಗೆ ಎಲ್ಲಾ ರೀತಿಯಿಂದ ಜವಾಬ್ದಾರಿ ವಹಿಸಿದ್ದು, ಅಲ್ಲಿ ಯಾವುದೇ ರೀತಿಯ ಪುಸ್ತಕಗಳ ತೊಂದರೆ ಬಂದರೆ ಅವರನ್ನು ಅದಕ್ಕೆ ಹೊಣೆಗಾರರನ್ನಾಗಿ ಮಾಡುವಂಥ ಒಂದು ಸರ್ಕ್ಯುಲರ್ ಅನ್ನು ಕಳುಹಿಸಿದೇವೆ. ಅದರ ಪ್ರಕಾರ ಅವರು ಕೆಲಸವನ್ನು ಮಾಡುತ್ತಾರೆ. ಹಾಗಾಗಿ, ಇವತ್ತು ಪುಸ್ತಕಗಳ ಲಭ್ಯತೆ ಇದೆ ಎನ್ನುವಂಥ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ: ನಾನು ತಮ್ಮ ಮೂಲಕ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಸರ್ಕಾರೀ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ಮತ್ತು ಪ್ರೌಢಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಉಚಿತ ಪುಸ್ತಕ ಮತ್ತು ಸಮವಸ್ತ್ರವನ್ನು ಕೂಡ ಕೊಡುವಂಥ ವ್ಯವಸ್ಥೆ ಇದೆ. ಆದರೆ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲಿ ಈ ವ್ಯವಸ್ಥೆ ಇಲ್ಲದೇ, ವಿದ್ಯಾರ್ಥಿಗಳು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಈ ರೀತಿಯ ತಾರತಮ್ಯವನ್ನು ಮುಂದಿನ ದಿನಗಳಲ್ಲಿ ಸರಿಪಡಿಸಬೇಕು, ಎಲ್ಲಾ ಶಾಲೆಗಳ ಮಕ್ಕಳಿಗೂ ಸಮಾನವಾಗಿ ಉಚಿತ ಪುಸ್ತಕ ಮತ್ತು ಸಮವಸ್ತ್ರವನ್ನು ಕೊಡುವಂಥ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ನೆ.ಲ. ನರೇಂದ್ರಬಾಬು: ಫಸ್ಟ್ ಮತ್ತು ಸೆಕೆಂಡ್ ಪಿ.ಯು.ಸಿ.ಯ ಪುಸ್ತಕಗಳೂ ಸಹ ಸಿಕ್ಕುತ್ತಿಲ್ಲ. ದಯಮಾಡಿ ಇದರ ಬಗ್ಗೆಯೂ ತಾವು ಗಮನ ನೀಡಬೇಕು. ಅಲ್ಲದೆ, ಆ ಪುಸ್ತಕಗಳು ಯಾವ ಮಟ್ಟದಲ್ಲಿವೆ ಎಂದರೆ, ಅವುಗಳ ಗುಣಮಟ್ಟ ಸ್ವಲ್ಪವೂ ಚೆನ್ನಾಗಿಲ್ಲ. ಪ್ರಿಂಟ್ ಆಗಿರುವಂಥ ಒಂದು ಪುಸ್ತಕವನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ ಕಳುಹಿಸುತ್ತಿದ್ದೆನೆ. ಅಲ್ಲದೆ, ಒಂದು ಪುಸ್ತಕಕ್ಕೆ 2–3 ರೂಪಾಯಿ ಹೆಚ್ಚು ಬೆಲೆಯನ್ನು ಕೇಳುತ್ತಾರೆ. ಆರ್ಟಿಫಿಷಿಯಲ್ ಡಿಮ್ಯಾಂಡ್ ಕ್ರಿಯೇಟ್ ಮಾಡಿ ಫಸ್ಟ್ ಮತ್ತು ಸೆಕೆಂಡ್ ಪಿ.ಯು.ಸಿ.ಯ ಇಂಗ್ಲೀಷ್, ಹಿಂದಿ ಮತ್ತು ಕನ್ನಡ ಪುಸ್ತಕಗಳಲ್ಲ ಎಂದು ಹೇಳುತ್ತಿದ್ದಾರೆ. ಕಾಲೇಜುಗಳಲ್ಲಿ ಪಾಠಗಳು ಪ್ರಾರಂಭವಾಗಿ ಎರಡು ತಿಂಗಳಾದರೂ ಮಾರುಕಟ್ಟೆಯಲ್ಲಿ ಪುಸ್ತಕಗಳು ಸಿಗುತ್ತಿಲ್ಲ. ಪುಸ್ತಕಗಳ ಲಭ್ಯತೆಯನ್ನು ಖಾತರಿಪಡಿಸುವಂತೆ ದಯವಿಟ್ಟು ಸಂಬಂಧಪಟ್ಟವರಿಗೆ ಹೇಳಬೇಕು. ಪುಸ್ತಕಗಳನ್ನು ಲ್ಯಾಮಿನೇಷನ್ ಮಾಡಬೇಕೆಂದು ಹೇಳಿದ್ದರೂ ಆ ಗುಣಮಟ್ಟದ

ಪುಸ್ತಕಗಳನ್ನು ಮಾಡಿಲ್ಲ. ದಯವಿಟ್ಟು ಇದನ್ನು ತನಿಖೆ ಮಾಡಬೇಕು ಮತ್ತು ಮಾರುಕಟ್ಟೆಯಲ್ಲಿ ಫಸ್ಟ್ ಮತ್ತು ಸೆಕೆಂಡ್ ಪಿ.ಯು.ಸಿ. ಪುಸ್ತಕಗಳು ದೊರೆಯುವುದನ್ನು ಖಾತರಿ ಮಾಡಬೇಕು ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಅವರನ್ನು ಕಾಪಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಸವರಾಜ ಎಸ್. ಹೊರಟ್ಟಿ: ಮಾನ್ಯ ಕೊಟ್ಟಾರಿಯವರು ಹೇಳಿದ ಹಾಗೆ, ಸರ್ಕಾರೀ ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಪರೀಕ್ಷಾ ಶುಲ್ಕ, ಸಮವಸ್ತ್ರ ಮತ್ತು ಪುಸ್ತಕಗಳನ್ನು ಉಚಿತವಾಗಿ ಕೊಡುವ ಪದ್ಧತಿ ಇದೆ, ಅದನ್ನು ಬರುವ ದಿನಗಳಲ್ಲಿ ಹಣಕಾಸಿನ ಲಭ್ಯತೆಯನ್ನು ವಿಚಾರ ಮಾಡಿ, ಅನುದಾನಿತ ಶಾಲೆಗಳ ಮಕ್ಕಳಿಗೂ ಕೊಡುವಂಥ ವಿಚಾರ ಪರಿಶೀಲನೆಯಲ್ಲಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ತಾವು ಕೊಟ್ಟಿರುವ ಸಲಹೆಯನ್ನು ಸಂಪೂರ್ಣವಾಗಿ ನೆನಪಿನಲ್ಲಿ ಇಟ್ಟುಕೊಂಡು ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ. ಇನ್ನೊಬ್ಬರು ಮಾನ್ಯ ಸದಸ್ಯರು ಹೇಳಿದ ಹಾಗೆ, ಪುಸ್ತಕಗಳು ಕ್ವಾಲಿಟಿ ಇಲ್ಲದಿದ್ದರೆ, ನಾನು ತಕ್ಷಣ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಟೆಂಡರ್ ಪ್ರಕಾರ, ನಿಯಮಗಳ ಪ್ರಕಾರ ಮಾಡಿರದಿದ್ದರೆ, ಸಂಬಂಧಪಟ್ಟವರು ಯಾರ್ಯಾರಿದ್ದಾರೆ, ಅವರ ಮೇಲೆ ಈಗಿಂದೀಗಲೇ ಕ್ರಮ ತೆಗೆದುಕೊಂಡು, ಇದನ್ನು ಸದನದಲ್ಲಿ ಮತ್ತೆ ಹೇಳುವಂಥ ಕೆಲಸವನ್ನು ನಾನು ಮಾಡುತ್ತೇನೆ.

ಬಿಜಾಪುರ ತಾಲ್ಲೂಕಿನ ಮಮದಾಪುರ ಹಾಗೂ ಬಸವನಬಾಗೇವಾಡಿ ತಾಲ್ಲೂಕಿನ ಮುಳವಾಡ ಗ್ರಾಮದಲ್ಲಿ ಹೊರ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ

163 (850) ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬಿಜಾಪುರ ತಾಲ್ಲೂಕಿನ ಮಮದಾಪುರ ಹಾಗೂ ಬಸವನಬಾಗೇವಾಡಿ ತಾಲ್ಲೂಕಿನ ಮುಳವಾಡ ಗ್ರಾಮದಲ್ಲಿ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಬೇಕೆಂದು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ;

(ಆ) ಈ ಸ್ಥಳಗಳಲ್ಲಿ ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲು ಏನು ಕ್ರಮ ಕೈಗೊಂಡಿದೆ ;

(ಇ) ಯಾವ ಕಾಲಮಿತಿ ಒಳಗಾಗಿ ಈ ಸ್ಥಳಗಳಲ್ಲಿ ಹೊಸ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವುದು ?

ಶ್ರೀ ಬಿ.ಎಸ್. ಹೊರಟ್ಟಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): (ಅ) ಇದೆ.